# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪಿ.ವಿ ಮೋಹನ್, ಇವರು ನಿಯಮ-72ರಡಿ ಪ್ರಸ್ತಾಪಿಸಿರುವ "ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಸರ್ಕಾರದಿಂದ ಗುರುತಿಸಲ್ಪಟ್ಟ ಎಂಡೋಸಲ್ಫಾನ್ ಸಂತ್ರಸ್ತರಿದ್ದು, ಇವರು ವಿವಿಧ ಹಂತದ ಅಂಗವೈಕಲ್ಯ ಹೊಂದಿದ್ದು, ಸಂಪೂರ್ಣ ಹಾಸಿಗೆಯಲ್ಲಿಯೇ ನಿರಂತರ ಆರೈಕೆಯಲ್ಲಿರುತ್ತಾರೆ. ಇವರಿಗೆ ಸರ್ಕಾರದಿಂದ ವೈದ್ಯಕೀಯ ಔಷಧಿ, ಪೌಷ್ಟಿಕ ಆಹಾರ ಮತ್ತು ಆರೈಕೆ ವ್ಯಕ್ತಿ ಅನುಗುಣವಾಗಿ ಆರ್ಥಿಕ ಸಹಾಯ ನೀಡಬೇಕಾಗಿದೆ. ಅಲ್ಲದೆ ಸಂಪೂರ್ಣ ಹಾಸಿಗೆ ಹಿಡಿದ ಸಂತ್ರಸ್ತರಿಗೆ ಹೆಚ್ಚುವರಿ ನೆರವು ಹಾಗೂ ಅವರನ್ನು ನೋಡಿಕೊಳ್ಳುತ್ತಿರುವ ಪೋಷಕರು/ ಕುಟುಂಬದ ಸದಸ್ಯರಿಗೆ Caregiver Allowance ನೀಡುವ ಬಗ್ಗೆ ಹಾಗೂ ಸಂತ್ರಸ್ತರಿಗೆ ಅಗತ್ಯವಿರುವ ಉಚಿತ ಔಷಧಿ ಫಿಸಿಯೋಥೆರಪಿ, ಪೌಷ್ಟಿಕ ಚಿಕಿತ್ಸೆ, Wheel Chair, ವಿಶೇಷ ಹಾಸಿಗೆ, ಡೈಪರ್‌ಗಳು ಹಾಗೂ ಇತರೆ ಸಹಾಯಕ ಸಾಧನಗಳನ್ನು ಸಮರ್ಪಕವಾಗಿ ಒದಗಿಸುವ ಬಗ್ಗೆ ಮತ್ತು ಮನೆ ಬಾಗಿಲಿಗೆ ವೈದ್ಯಕೀಯ ಕಲ್ಪಿಸುವ ಬಗ್ಗೆ ಹಾಗೂ ಇವರುಗಳಿಗೆ ಶಾಶ್ವತ ಪುನರ್ವಸತಿ ಕಲ್ಪಿಸುವ ಬಗ್ಗೆ ಸರ್ಕಾರ ಯೋಜನೆ ರೂಪಿಸುವುದು ಅತ್ಯಾವಶ್ಯಕವಾಗಿದೆ ಎಂಬ ಬಗ್ಗೆ:-**

**ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಹೇಳಿಕೆ:-**

*****

ಕರ್ನಾಟಕ ಗೇರು ಅಭಿವೃದ್ಧಿ ನಿಗಮದವರು ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಗೇರು ತೋಪುಗಳಿಗೆ 1980-81 ರಿಂದ 2000-2001 ಅವಧಿಯಲ್ಲಿ ಎಂಡೋಸಲ್ಫಾನ್ ಕ್ರಿಮಿನಾಶಕವನ್ನು ಸಿಂಪಡಣೆ ಮಾಡಿದ್ದರಿಂದ ಆ ಭಾಗದ ಜನರು ವಿಶೇಷ ಕಾಯಿಲೆಗಳಿಂದ ಬಳಲುತ್ತಿದ್ದಾರೆ. ಮಾನ್ಯ ಉಚ್ಚ ನ್ಯಾಯಾಲದ ಆದೇಶ ಸಂಖ್ಯೆ: W.P.(Civil) No.213/2011 Dated:13-5-2011 ರಂತೆ ಎಂಡೋಸಲ್ಫಾನ್ ಉತ್ಪಾದನ, ತಯಾರಿಕೆ ಹಾಗೂ ಬಳಕೆಯನ್ನು ನಿಷೇಧಿಸಿದೆ. ಎಂಡೋಸಲ್ಫಾನ್ ಭಾದಿತ ಅಂಗವಿಕಲರಿಗೆ ಆರೋಗ್ಯ ಸುಧಾರಣೆಗೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಫಲಾನುಭವಿಗಳನ್ನು ಗುರುತಿಸಿ ಗುರುತಿನ ಚೀಟಿಗಳನ್ನು ನೀಡಲಾಗಿದೆ. ಈ ಸಂತ್ರಸ್ತರಲ್ಲಿ ಅಂಗವಿಕಲತೆ ಪ್ರಮಾಣ ಆಧರಿಸಿ, ಅಂಗವಿಕಲತೆಗೆ ಅನುಗುಣವಾಗಿ ಮಾಸಾಶನವನ್ನು ಕಂದಾಯ ಇಲಾಖೆಯಿಂದ ನೀಡಲಾಗುತ್ತಿದೆ. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಹಾಗೂ ಕರ್ನಾಟಕ ಸರ್ಕಾರದ ಆದೇಶದಂತೆ ಶೇ.25% ರಿಂದ 60% ರ ವರೆಗೆ ವಿಕಲಚೇತನರೆಂದು ಗುರುತಿಸಲ್ಪಟ್ಟವರಿಗೆ ಮಾಸಿಕ 2000.00 ರೂಪಾಯಿಗಳನ್ನು (ಎರಡು ಸಾವಿರ) ಮತ್ತು ಶೇ. 60% ಮೇಲ್ಪಟ್ಟು ವಿಕಲಚೇತನರೆಂದು ಗುರುತಿಸಲ್ಪಟ್ಟವರಿಗೆ ಮಾಸಿಕ 4000.00 ರೂಗಳಂತೆ (ನಾಲ್ಕು ಸಾವಿರ) ಪ್ರತಿ ತಿಂಗಳು ಸಂತ್ರಸ್ತರ ಖಾತೆಗಳಿಗೆ ಜಮಾಗೊಳ್ಳುವಂತೆ ಕಂದಾಯ ಇಲಾಖೆಯವರು ಕ್ರಮ ಕೈಗೊಂಡಿರುತ್ತಾರೆ. ಶೇಕಡ 25% ಅಂಗವಿಕಲತೆ ಇರುವ ಎಲ್ಲಾ ಸಂತ್ರಸ್ತರಿಗೆ ಉಚಿತ ಆರೋಗ್ಯ ಸೇವೆಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ನೀಡಲಾಗುತ್ತಿದೆ. ಶೇ.25% ರಿಂದ 60% ರ ವರೆಗಿನ ಹಾಗೂ ಶೇ. 60% ಮೇಲ್ಪಟ್ಟು ವಿಕಲಚೇತನರೆಂದು ಗುರುತಿಸಲ್ಪಟ್ಟವರಿಗೂ ಸಹ ಎಲ್ಲಾ ಮಾಸಾಶನವನ್ನು ಹೊರತು ಪಡಿಸಿ ಉಳಿದಂತೆ ಎಲ್ಲಾ ರೀತಿಯ ಆರೋಗ್ಯ ಸೇವೆಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಉಚಿತವಾಗಿ ನೀಡಲಾಗುತ್ತಿದೆ.

ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಒಟ್ಟು 7661 ಸಂತ್ರಸ್ತರನ್ನು ಗುರುತಿಸಲಾಗಿದೆ.

| ಕ್ರಮ ಸಂ | ಅಂಗವೈಕಲ್ಯ ಶೇಕಡವಾರು | ಸಂಖ್ಯೆ | ಮಾಸಾಶನ ರೂ. |
|---|---|---|---|
| 1 | 25 % | 776 | - |
| 2 | 25 % ರಿಂದ 59 % | 2013 | 2000 |
| 3 | 60 % ಮೇಲ್ಪಟ್ಟು | 4872 | 4000 |

ಸಂತ್ರಸ್ತರಲ್ಲಿ ಸಂಪೂರ್ಣ ಹಾಸಿಗೆ ಹಿಡಿದವರಿಗೆ ಸಂಚಾರಿ ಆರೋಗ್ಯ ಘಟಕಗಳ ಮೂಲಕ ಮನೆ ಮನೆ ಭೇಟಿ ಮಾಡಿ ಅಗತ್ಯವಿರುವ ಔಷಧಿ ಮತ್ತು ಫಿಸಿಯೋಥೆರಫಿ ಚಿಕಿತ್ಸೆಗಳನ್ನು ನೀಡಲಾಗುತ್ತಿದೆ. ಒಟ್ಟು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ -4 ಉತ್ತರ ಕನ್ನಡ ಜಿಲ್ಲೆಯಲ್ಲಿ- 6 ಹಾಗೂ ಉಡುಪಿ ಜಿಲ್ಲೆಯಲ್ಲಿ-1 ಒಟ್ಟು ಮೂರು ಜಿಲ್ಲೆಗಳಲ್ಲಿ 11 ಸಂಚಾರಿ ಘಟಗಳು ಕಾರ್ಯ ನಿರ್ವಹಿಸುತ್ತಿದ್ದು ಉಚಿತ ಆರೋಗ್ಯ ಸೇವೆಗಳನ್ನು ನೀಡಲಾಗುತ್ತಿದೆ.

**ಎಂಡೋಸಲ್ಫಾನ್ ಸಂತ್ರಸ್ತರಿಗೆ ಹಮ್ಮಿಕೊಳ್ಳಲಾಗಿರುವ ಕಾರ್ಯಕ್ರಮಗಳು**

1. ತಜ್ಞ ವೈದ್ಯರ ಶಿಬಿರಗಳನ್ನು ನಡೆಸುವುದು
2. ಸಂಚಾರಿ ಆರೋಗ್ಯ ಘಟಕ

3. ಫಿಸಿಯೋಥೆರಫಿ ಘಟಕಗಳು
4. ಪಾಲನಾ ಕೆಂದ್ರಗಳು (ಡೇ ಕೇರ್ ಸೆಂಟರ್)
5. ಕೌಶಲ್ಯ ತರಬೇತಿ ಕೇಂದ್ರ
6. ಸಂತ್ರಸ್ತರು ಹೆಚ್ಚಿನ ಚಿಕಿತ್ಸೆ ಪಡೆದಲ್ಲಿ ವೈದ್ಯಕೀಯ ಮರುಪಾವತಿ.

ಎಲ್ಲಾ ಎಂಡೋಸಲ್ಫಾನ್ ಸಂತ್ರಸ್ತರಿಗೂ ವೈದ್ಯಕೀಯ ಸೇವೆಯನ್ನು ನೀಡುವುದು ಹಾಗೂ ಸಂತ್ರಸ್ತರು ಗುರುತಿನ ಚೀಟಿ ಮುಖಾಂತರ ಒಡಂಬಡಿಕೆ ಮಾಡಿಕೊಂಡಿರುವ ಸೂಪರ್ ಸ್ಪೇಷಾಲಿಟಿ ಆಸ್ಪತ್ರೆಗಳಲ್ಲಿ ಉಚಿತ ವೈದ್ಯಕೀಯ ಸೇವೆಯನ್ನು ನೀಡುವುದು., ತುರ್ತಾಗಿ ಇತರೇ ಆಸ್ಪತ್ರೆಗಳಲ್ಲಿ ಸಂತ್ರಸ್ತರು ಸೇವೆ ಪಡೆಯಲು ಅವಕಾಶ ನೀಡುವುದು, ವೈದ್ಯಕೀಯ ವೆಚ್ಚವನ್ನು ಸಂಬಂಧಪಟ್ಟ ಆಸ್ಪತ್ರೆಗೆ ಹಾಗೂ ಸಂತ್ರಸ್ತರಿಗೆ ಮರುಪಾವತಿ ಮಾಡುವುದು., ಅಲ್ಲದೆ ಎಂಡೋಸಲ್ಫಾನ್ ಸಂತ್ರಸ್ತರು ಅವಶ್ಯಕವಿರುವ ಔಷಧವನ್ನು ಪಡೆದಲ್ಲಿ ಅದಕ್ಕೂ ಸಹ ಮರು ಪಾವತಿ ಮಾಡಲಾಗುತ್ತಿದೆ.

ಎಂಡೋಸಲ್ಫಾನ್ ಸಂತ್ರಸ್ತರಿಗೆ ಉಚಿತ ಬಸ್‌ಪಾಸ್ ವ್ಯವಸ್ಥೆ ಕಲ್ಪಿಸಲಾಗಿದೆ. (ಸಂತ್ರಸ್ತರಿಗೆ ಹಾಗೂ ಅವರೊಂದಿಗೆ ಪ್ರಯಾಣಿಸುವ ಒಬ್ಬರಿಗೆ)

ಎಂಡೋಸಲ್ಫಾನ್ ಸಂತ್ರಸ್ತರಿಗಾಗಿ 6 ಪಾಲನಾ ಕೆಂದ್ರಗಳನ್ನು ಪ್ರಾರಂಭಿಸಲಾಗಿದೆ. (ಕೊಕ್ಕಡ, ಕೊಯಿಲ, ವಿಟ್ಲ, ಪಾಣಾಜೆ, ಬೆಳ್ತಾರೆ, ಕಣಿಯೂರು) ಈ ಪಾಲನಾ ಕೇಂದ್ರಗಳಲ್ಲಿ ಸಂತ್ರಸ್ತರಿಗೆ ಅವರವರ ಮನೆಯಿಂದ ವಾಹನದಲ್ಲಿ ಕೇಂದ್ರಕ್ಕೆ ಕರೆತಂದು ಫಿಸಿಯೋಥೆರಪಿ, ಆಪ್ತ ಸಮಾಲೋಚನೆ, ಅಕ್ಷರಾಭ್ಯಾಸ, ಕರಕುಶಲ ತರಬೇತಿ, ವಿಶೇಷ ಶಿಕ್ಷಣ, ಪ್ರತಿ ತಿಂಗಳು ಸಂತ್ರಸ್ತರಿಗೆ ಆರೋಗ್ಯ ತಪಾಸಣೆ, ಕೌಶಲ್ಯ ತರಬೇತಿ, ಕ್ರೀಡೆ, ಮನೋರಂಜನಾ ಕಾರ್ಯಕ್ರಮ ಹಾಗೂ ಬೆಳಿಗ್ಗೆ ಮಧ್ಯಾಹ್ನ, ಸಂಜೆ ಆಹಾರವನ್ನು ನೀಡಿ ಸಂಜೆ ಅವರವರ ಮನೆಗೆ ತಲುಪಿಸುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಎಂಡೋಸಲ್ಫಾನ್ ಸಂತ್ರಸ್ತರಿಗೆ ಅವಶ್ಯಕವಿರುವ ವೀಲ್‌ಚೇರ್, ವಾಟರ್‌ಬೆಡ್, ವಾಕಿಂಗ್ ಸ್ಟಿಕ್, ಸ್ಯಾನಿಟರಿ ನ್ಯಾಪ್‌ಕಿನ್, ಡ್ಯಾಲಿರಪರ್ಸ್, ಡೈಪರ್ಸ್ ಗಳನ್ನು ಇಲಾಖೆಯಿಂದ ಹಾಗೂ ಜಿಲ್ಲೆಯಲ್ಲಿ ಇರುವ ಕಂಪೆನಿಗಳ ಸಿ.ಎಸ್.ಆರ್ ಯೋಜನೆಯಡಿಯಲ್ಲಿ ಬೇಡಿಕೆಗೆನುಗುಣವಾಗಿ ವಿತರಿಸಲಾಗಿದೆ.

ಎಂಡೋಸಲ್ಫಾನ್ ಸಂತ್ರಸ್ತರಿಗಾಗಿ ಫಿಸಿಯೋಥೆರಪಿಸ್ಟ್, ಶುಶ್ರೂಷಕಿ, ಸಹಾಯಕರಿದ್ದು ಸಂತ್ರಸ್ತರಿಗೆ 5 ಫಿಸಿಯೋಥೆರಪಿ ಘಟಕಗಳನ್ನು ತೆರೆಯಲಾಗಿದೆ.

ಎಂಡೋಸಲ್ಫಾನ್ ಸಂತ್ರಸ್ತರಿಗಾಗಿ ಶಾಶ್ವತ ಪುನರ್ವಸತಿ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ ರೂ. 39.8 ಕೋಟಿಗಳ ಅನುದಾನದ ಪ್ರಸ್ತಾವನೆಯು ಆಯುಕ್ತಾಲಯದ ಹಂತದಲ್ಲಿ ಪರಿಶೀಲನೆಯಲ್ಲಿದೆ.

**ಆಕುಕ 156 ಎಸ್‌ಎಂಎಂ 2026**

(ಯು.ಟಿ. ಖಾದರ್)
ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಹಾಗೂ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು